KATK010054202022

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.494/2022</u>**

ಪ್ರಾ.ಸಾ. ಃ **1**

ದೋ.ಸಾ. ಃ **1**

ದಿ.**15.12.2025**

ಹೆಸರು ಃ ದರ್ಶನ್

ತಂದೆಯ ಹೆಸರು ಃ ಗುರುಸ್ವಾಮಯ್ಯ

ವಯಸ್ಸು ಃ **30** ವರ್ಷ

ಉದ್ಯೋಗ ಃ ಹೋಟೆಲ್ ಕೆಲಸ

ವಾಸಸ್ಥಳ ಃ ಕ್ಯಾತ್ಸಂದ್ರ

ಸಾಕ್ಷಿಯನ್ನು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ನನಗೆ ಪವನ್ ಗೊತ್ತಿಲ್ಲ. ದಿನಾಂಕ **09.01.2021** ರಂದು ಮಧ್ಯಾಹ್ನ **1.30** ಗಂಟೆಗೆ ತುಮಕೂರಿನ ಲೈಬ್ರರಿ ಕಟ್ಟಡದ ಮುಂದುಗಡೆ ನಿಂತಿದ್ದೆನು. ಅಲ್ಲಿಗೆ ಅಬಕಾರಿ ಇಲಾಖೆಯ ವಾಹನ ಬಂದಿತು. ಚೋಳಂಬಳ್ಳಿ ಗ್ರಾಮದಲ್ಲಿ ಗಾಂಜಾ ಪ್ರಕರಣ ಆಗಿದೆ, ಪಂಚನಾಮೆಗೆ ಸಹಕರಿಸಬೇಕೆಂದು ನೋಟೀಸ್ ಕೊಟ್ಟರು. ಆ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ಪವನ್ ಕೂಡಾ ಅಲ್ಲಿಯೇ ಇದ್ದರು. ಅಬಕಾರಿ ಅಧಿಕಾರಿಗಳು ನನ್ನನ್ನು ಮತ್ತು ಪವನ್ ನನ್ನು ಆ ಜೀಪಿನಲ್ಲಿ ಹತ್ತಿಸಿಕೊಂಡರು. ಮಾತನಾಡಿಸುವಾಗ ಆತ ಪವನ್ ಎಂದು ಗೊತ್ತಾಯಿತು.
2. ನಮ್ಮನ್ನು ಚೋಳಂಬಳ್ಳಿಗೆ ಕರೆದುಕೊಂಡು ಹೋದರು. ಸಿದ್ದಿಖ್ ಪಾಷರವರ ಮನೆಯ ಹತ್ತಿರ ಹೋದೆವು. ಆರೋಪಿಯ ಮನೆಯ ಹತ್ತಿರ ಗಾಂಜಾ ಗಿಡಗಳನ್ನು ತಪಾಸಣೆ ಮಾಡಿದರು. ಒಟ್ಟು 4 ಗಾಂಜಾ ಗಿಡಗಳು ಸಿಕ್ಕಿದವು. ಆ 4 ಗಾಂಜಾ

ಗಿಡಗಳನ್ನು 2 ಚೀಲಗಳಿಗೆ ಹಾಕಿದರು. ತೂಕದ ಇನ್ಸ್ ಪೆಕ್ಟರ್ ಇದ್ದು, ಅವುಗಳನ್ನು ತೂಕ ಮಾಡಿದರು. ಅವರ ಮನೆಯ ಒಳಗಡೆ ತಪಾಸಣೆ ಮಾಡಿದರು. ಮನೆಯ ಒಳಗಡೆ ಬೀರುವಿನಲ್ಲಿ ಒಂದು ಡಬ್ಬ ಸಿಕ್ಕಿತು. ಆ ಡಬ್ಬದಲ್ಲಿ ಗಾಂಜಾ ಬೀಜಗಳು ಇದ್ದವು. ಅದನ್ನು ಕವರ್ ಗೆ ಹಾಕಿ ಸೀಲ್ ಮಾಡಿದರು. ಅವುಗಳನ್ನು ಕಛೇರಿಗೆ ತೆಗೆದುಕೊಂಡು ಬಂದರು. ಆ ದಿನ ಪೊಲೀಸರು ಮಹಜರ್ ಮಾಡಿ ಫೋಟೋ ತೆಗೆದುಕೊಂಡರು. ಆ ಮಹಜರ್ ನ್ನು ನೋಡುತ್ತಿದ್ದು, ಅದನ್ನು ನಿಶಾನೆ ಪಿ2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ2(ಎ) ಎಂದು ಗುರುತಿಸಲಾಯಿತು. 4 ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಶಾನೆ ಪಿ3 ರಿಂದ 6 ಎಂದು ಗುರುತಿಸಲಾಯಿತು. ಆ ದಿನ ಈ ನ್ಯಾಯಾಲಯದ ಮುಂದಿರುವ ಆರೋಪಿ ಅಲ್ಲಿ ಇದ್ದನು.

(ಮುಂದುವರೆದ ಮುಖ್ಯ ವಿಚಾರಣೆಯನ್ನು ಮಾನ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದೂಡಲಾಯಿತು).

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ**.**

ಸಹಿ**/-**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು